**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.**

**ಸಿಸಿ 2090/ 2015**

| | | | |
|---|---|---|---|
| **ಸಾ ಕ್ಷಿದಾರರ ಹೆಸರು** | - | ಶೇಷಾದ್ರಿ | **ಚಾ.ಸಾ.-3** |
| **ತಂದೆ ಹೆಸರು** | - | ಮಾಸ್ತಯ್ಯ ಶೆಟ್ಟಿ | **ಫ್ರಾ.ಸಾ.-3** |
| **ವಯಸ್ಸು** | - | 56 ವರ್ಷ | |
| **ಉದ್ಯೋಗ** | - | ವ್ಯಾಪಾರ | |
| **ವಾಸ ಸ್ಥಳ** | - | ಕುಣಿಗಲ್ | |

ದಿನಾಂಕಃ 25.02.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ**

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ, ಸದರೀ ದಾಖಲೆ ಸ್ಥಳ ಮಹಜರ್ ಆಗಿದ್ದು, ಅದನ್ನು ಈಗಾಗಲೇ ನಿ.ಪಿ. 7 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ. 7 ಬಿ ಎಂದು ಗುರುತಿಸಲಾಯಿತು. ಸದರೀ ದಾಖಲೆಗೆ ಸುಮಾರು 10 ವರ್ಷಗಳ ಹಿಂದೆ ಮದ್ದೂರಿನ ನಮ್ಮ ಅಂಗಡಿಯ ಬಳಿ ಪೋಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ. ನಿ.ಪಿ. 7 ರಲ್ಲಿ ಪೋಲೀಸರು ಏನು ಬರೆದಿದ್ದಾರೆಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ನಿ.ಪಿ. 7 ದಾಖಲೆಗೆ ನನ್ನನ್ನು ಹೊರತುಪಡಿಸಿ ಬೇರೆ ಯಾರು ಸಹಿ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ಪೋಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ಮಹಜರ್ ಕ್ರಮ ಜರುಗಿಸಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

**( ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿ ನೀಡಲಾಯಿತು. )**

**ಪಾಟೀ ಸವಾಲುಃ ಮಾನ್ಯ ಎ ಪಿ ಪಿ ರವರಿಂದ**

ದಿನಾಂಕಃ 07-09-2014 ರಂದು ಬೆಳಗ್ಗೆ 11.30 ರಿಂದ 12.00 ಗಂಟೆಯವರೆಗೆ ಚಾ,ಸಾ. 1 ರವರು ತೋರಿಸಿದ ಕೃತ್ಯ ನಡೆದ ಸ್ಥಳದಲ್ಲಿ ನಿಮ್ಮ ಮತ್ತು ಚಾ.ಸಾ. 2 ರವರ ಸಮಕ್ಷಮ ನಿ.ಪಿ. 7 ರಂತೆ ಮಹಜರ್ ಕ್ರಮ ಜರುಗಿಸಿ, ಆರೋಪಿತರು ಕೃತ್ಯಕ್ಕೆ ಉಪಯೋಗಿಸಿದ 1 ಅಡಿ ಉದ್ದದ ಹೆಬ್ಬೆರಳಿಗಿಂತ ಸ್ವಲ್ಪ ದಪ್ಪಾಗಿರುವ ಒಂದು ಕಬ್ಬಿಣದ ರಾಡ್ನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ನೀವು ಈ ಕುರಿತು ದಿಃ07-09-2014 ರಂದು ಈಗ ಓದಿ ಹೇಳಿದಂತೆ ಹೇಳಿಕೆ ಕೊಟ್ಟಿರುತ್ತೀರೀ ಎಂದರೆ ಸರಿಯಲ್ಲ. ಸಾಕ್ಷಿ ಒಪ್ಪದ ಹೇಳಿಕೆಯನ್ನು ನಿ.ಪಿ. 9 ಎಂದು ಗುರುತಿಸಲಾಯಿತು. ನಿ.ಪಿ. 7 ಮತ್ತು 9 ರಲ್ಲಿರುವ ಎಲ್ಲಾ ವಿಚಾರಗಳು ನಿಮಗೆ ಗೊತ್ತಿದ್ದರೂ, ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಆರೋಪಿ ಪರ ವಕೀಲರಿಂದ ಏನೂ ಇಲ್ಲ.</u>**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ

ಮತ್ತು ಜೆ ಎಂ ಎಫ್ ಸಿ , ಮದ್ದೂರು.